ಸರ್ಕಾರವು ಡಾ|| ಕೆ.ವಿ. ಪುಟ್ಟಪ್ಪನವರಿಗೆ ಭಾರತ ರತ್ನ ಪ್ರಶಸ್ತಿ

999. ಶ್ರೀ ರಾಮಲಿಂಗರೆಡ್ಡಿ (ಜಯನಗರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಸರ್ಕಾರವು ಡಾ: ಕೆ. ವಿ. ಪುಟ್ಟಪ್ಪನವರಿಗೆ ಭಾರತ ರತ್ನ ಪ್ರಶಸ್ತಿ ಪ್ರಧಾನಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಿರುವುದು ನಿಜವೇ ;

ಆ) ಹಾಗಿದ್ದಲ್ಲಿ, ಕೇಂದ್ರ ಸರ್ಕಾರವು ಡಾ : ಕೆ.ವಿ. ಪುಟ್ಟಪ್ಪನವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಪ್ರಧಾನಿಸಿದೆಯೆ;

ಇ) ಹಾಗಿಲ್ಲದಿದ್ದಲ್ಲಿ ರಾಜ್ಯಸರ್ಕಾರವು ಕೇಂದ್ರ ಸರ್ಕಾರಕ್ಕೆ ಡಾ: ಕೆ. ವಿ. ಪುಟ್ಟಪ್ಪನವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಮಾಡವಲ್ಲಿ ಏನು ಕ್ರಮಕ್ಕೆಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) –

ಅ) ಹೌದು.
ಆ) ಇಲ್ಲ.
ಇ) ಈ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಸೇತುವೆ ದುರಸ್ತಿ

985. ಶ್ರೀ ಆರ್. ಎನ್. ನಾಯ್ಕ (ಭಟ್ಕಳ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಹೊನ್ನಾವರದಲ್ಲಿ ರಾಷ್ಟ್ರೀಯ ಹೆದ್ದಾರಿ ಸೇತುವೆ ಕಿಟ್ಟುಹೋಗಿದ್ದು ಅದರ ದುರಸ್ತಿಗಾಗಲಿ ಅಥವಾ ಹೊಸ ಸೇತುವೆ ಕಟ್ಟುವುದಕ್ಕಾಗಲಿ ಸರ್ಕಾರವು ಕ್ರಮ ಕೈಗೊಳ್ಳುವುದೇ;

ಆ) ಸದರಿ ಸೇತುವೆ ಕಟ್ಟಿರುವುದರಿಂದ ವಾಹನಗಳ ಚಾಲನೆಗಾಗಿ ಪರ್ಯಾಯ ವ್ಯವಸ್ಥೆಯ ಉದ್ದೇಶದಿಂದ ಇಡಗುಂಜಿ ಬಳ್ಳೂರ, ಹೆಗ್ಗಾರ ನಗರ ಬಸ್ಸಿಕೇರಿ ರಸ್ತೆಯನ್ನು ಶರಾವತಿ ಟೇಲ್‌ರೇಸ್ ಯೋಜನೆಯ ಸೇತುವೆವರೆಗೆ ದುರಸ್ತಿ ಗೊಳಿಸಿ ಯೋಗ್ಯ ರಸ್ತೆಯನ್ನಾಗಿ ಮಾಡಲು ಸರ್ಕಾರ ಆದೇಶ ಮಾಡಿರುವುದು ನಿಜವಲ್ಲವೆ ;

ಇ) ಹಾಗಿದ್ದಲ್ಲಿ, ಈ ಕೆಲಸ ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) :–

ಅ) ಹೌದು
ಆ) ಆದೇಶ ಮಾಡಿಲ್ಲ.
ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ ನಿಂದ ಲೋಕೋಪಯೋಗಿ ಇಲಾಖೆ ವಾಪಸ್ ಪಡೆದ ರಸ್ತೆಗಳ ಬಗ್ಗೆ

1029. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಳ) :– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಎಷ್ಟು ಸಾವಿರ ಕಿಲೋ ಮೀಟರ್ ರಸ್ತೆಯನ್ನು ಜಿಲ್ಲಾ ಪರಿಷತ್‌ನಿಂದ ಸರ್ಕಾರ ವಾಪಸ್ ಪಡೆದಿದೆ ಹಾಗೂ ಇದರ ಉದ್ದೇಶವೇನು;

ಆ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಕಿಲೋ ಮೀಟರ್ ರಸ್ತೆ ವಾಪಸ್ ಪಡೆದಿದೆ;

ಇ) ಕೋಲಾರ ಜಿಲ್ಲೆಯ ಬಂಗಾರು ಪೇಟೆ ತಾಲ್ಲೂಕಿಗೆ ಎಷ್ಟು ಕಿಲೋಮೀಟರ್ ರಸ್ತೆ ವಾಪಸ್ ಪಡೆದಿದೆ?

ಶ್ರೀ ಜಿ.ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು) –

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ 10000 ಕಿ.ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ 50 ಕಿ.ಮೀ ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿ ಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ 18.2.1992 ರಂದು ಹೊರಡಿಸಲಾಗಿದೆ.

ಆ) ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಇ) ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

## ಮೂಡಬಿದ್ರೆ ಕ್ಷೇತ್ರದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು.

955. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಮೂಡಬಿದರೆ ಕ್ಷೇತ್ರದಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳಿಂದ ನೀರಾವರಿ ಪ್ರಯೋಜನ ಪಡೆಯುವ ಜಮೀನೆಷ್ಟು;

ಇ) ಇದಕ್ಕಾಗಿ ತಗಲುವ ವೆಚ್ಚವೆಷ್ಟು;

ಈ) ಈ ಯೋಜನೆಯ ಕೆಲಸವನ್ನು ಎಂದಿನಿಂದ ಪ್ರಾರಂಭ ಮಾಡಲಾಗುವುದು?

ಶ್ರೀ ಓ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :–

ಅ) 1) ಎಳ್ಳಂಜೆ, ಮಂಗಳೂರು, ತಾಲ್ಲೂಕು
2) ಬಳಕುಂಜೆ, ಮಂಗಳೂರು, ತಾಲ್ಲೂಕು
3) ಜಂಹರಗುಂಡಿ, ಕಾರ್ಕಳ ತಾಲ್ಲೂಕು
4) ಸುರಿಂಜೆ. . . . . (ಮಂಗಳೂರು ತಾಲ್ಲೂಕು)

ಆ) . . . ಯೋಜನೆ . . . . . ಅಚ್ಚುಕಟ್ಟು ಎಕರೆಗಳಲ್ಲಿ

| | |
|---|---|
| 1) ಎಳ್ಳಂಜೆ . . . . . | 200 |
| 2) ಬಳಕಂಜೆ | 351 |
| 3) ಜುಂಹರ ಗುಂಡಿ . . . . . | 225 |
| 4) ಸುರಂಜೆ | 247 |
| . . ಒಟ್ಟು . . . . . | 1023 ಎಕರೆಗಳು. |

ಇ)

| | | |
|---|---|---|
| 1) | ಎಳ್ಳಂಜೆ | ರೂ. 18.60 ಲಕ್ಷ |
| 2) | ಬಳಕುಂಜೆ | ರೂ. 26.57 ಲಕ್ಷ |
| 3) | ಜಂಚರ ಗುಂಡಿ | ರೂ. 24.00 ಲಕ್ಷ |
| 4) | ಸುರಂಜೆ | ರೂ. 26.20 ಲಕ್ಷ |
| | ಒಟ್ಟು | ರೂ. 95.37 ಲಕ್ಷ |

ಈ) ಈ ಯೋಜನೆಗಳು ಏತ ನೀರಾವರಿ ವ್ಯಾಪ್ತಿಯಲ್ಲಿ ಬರುವುದರಿಂದ ನಬಾರ್ಡ್‌ನಿಂದ ಹಣಕಾಸಿನ ನೆರವು ದೊರೆತ ಕೂಡಲೇ ಪ್ರಾರಂಭಿಸಲಾಗುವುದು.